ಶ್ರೀ ವೀರೇಂದ್ರ ಪಾಟೀಲ್.—ತಮಗೇ ಗೊತ್ತಿರಬಹುದು. ಈಗಿರತಕ್ಕ ಎಲ್ಲಾ ಪ್ರಾಜೆಕ್ಟ್ ಗಳನ್ನು ಮಾಡುವುದಕ್ಕೆ 158 ಲಕ್ಷ ರೂಪಾಯಿಗಳೆಂದು ಮಾಡಿದ್ದಾರೆ. ಆ ಪ್ರಾಜೆಕ್ಟ್ ಗಳನ್ನು ಎಲ್ಲಾ ತೆಗೆದುಕೊಂಡು ಮುಂದುವರಿಸುವುದಕ್ಕೆ ಹಣ ದೊರಕುತ್ತದೆ. ಬಹಳ ನಿಧಾನ ವಾಗುವುದಿಲ್ಲ.

Excess salary drawn by the Secretary of A. P. M. Committee, Ramdurg

393. Smt. SHARADAVVA M. PATTAN (Ramdurg).—

Will the Minister for Development be pleased to state:—

(*a*) whether the Secretary of the Agricultural Produce Marketing Committee, Ramadurg has drawn salary more than the salary fixed by the Government ;

(*b*) if more salary is drawn, whether any action has been taken by them to recover the same ?

Sri B. L. GOWDA (Deputy Minister for Co-operation).—

(*a*) Yes.

(*b*) The matter is *sub judice* as the concerned Secretary has obtained stay order from the High Court in respect of the Government order.

ಶ್ರೀಮತಿ ಶಾರದವ್ವ ಎಂ. ಪಟ್ಟಣ್.—(ಅ) ಪ್ರಶ್ನೆಗೆ ಉತ್ತರವಾಗಿ ಕೋರ್ಟಿನಿಂದ ತಡೆಯಾಜ್ಞೆ ಯಾಗಿದೆಯೆಂದು ಹೇಳಿದ್ದೀರಿ. ಅವರು ನಾನು ಪ್ರಶ್ನೆ ಹಾಕುವುದಕ್ಕೆ ಮುಂಚೆ ಕೋರ್ಟಿಗೆ ಹೋಗಿದ್ದಾರೆಯೇ ಅಥವಾ ಈ ಪ್ರಶ್ನೆಯನ್ನು ಸರ್ಕಾರದವರು ಪರಿಶೀಲಿಸಿದಮೇಲೆ ಕೋರ್ಟಿಗೆ ಹೋಗಿದ್ದಾರೆಯೇ ?

† ಶ್ರೀ ಬಿ. ಎಲ್. ಗೌಡ.—ಈ ಸಭೆಯಲ್ಲಿ ಪ್ರಶ್ನೆ ಬರುವುದಕ್ಕೆ ಮುಂಚೆಯೇ ಅವರು ಕೋರ್ಟಿಗೆ ಹೋಗಿದ್ದಾರೆ.

ಶ್ರೀಮತಿ ಶಾರದವ್ವ ಎಂ. ಪಟ್ಟಣ್.—ಕಾರ್ಯದರ್ಶಿಯವರ ಪಗಾರವೆಷ್ಟು ಎಂಬ ಬಗ್ಗೆ ಸರ್ಕಾರದವರು ಏಕೆ ನಿಗಾ ಕೊಟ್ಟಿಲ್ಲ ?

ಶ್ರೀ ಬಿ. ಎಲ್. ಗೌಡ.—ಕಾನೂನು ಪ್ರಕಾರ ಹಾಗೂ ಮಾರ್ಕೆಟ್ ಕಮಿಟಿ ಆದಾಯದ ಅನ್ವಯ ಪ್ರಕಾರ ಕಾರ್ಯದರ್ಶಿಯವರು 100 ರಿಂದ 201 ರೂಪಾಯಿಗಳವರೆಗೆ ಪಗಾರ ತೆಗೆದು ಕೊಳ್ಳಬೇಕಾಗಿತ್ತು. 1—9—1965 ರಿಂದ 270—25—370 ಗ್ರೇಡಿನಲ್ಲಿ ಕಾನೂನಿಗೆ ವಿರೋಧವಾಗಿ ಪಗಾರ ಪಡೆದಿರುವುದು, ಕಾನೂನು ಬಾಹಿರವಾದುದು ಎಂಬುದಾಗಿ ಚೀಫ್ ಮಾರ್ಕೆಟಿಂಗ್ ಆಫೀಸರ್ ಅವರು ಹೇಳಿದ್ದಾರೆ.

ಶ್ರೀಮತಿ ಶಾರದವ್ವ ಎಂ. ಪಟ್ಟಣ್.—ಕೋರ್ಟಿನಲ್ಲಿ ಇದು ಇತ್ಯರ್ಥವಾದಮೇಲೆ ಸರ್ಕಾರದ ಕಾನೂನಿನಲ್ಲಿ ಅದನ್ನು ವಾಪಸ್ಸು ತೆಗೆದುಕೊಳ್ಳುವ ರೂಲ್ಸ್ ಇದೆಯೇ ? ಅವರ ಮೇಲೆ ತಕ್ಕ ಕ್ರಮ ತೆಗೆದುಕೊಂಡು ಅದನ್ನು ಪೂರ್ತಿಯಾಗಿ ವಸೂಲುಮಾಡುತ್ತೇವೆಂದು ಧೈರ್ಯ ದಿಂದ ಹೇಳುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಮಾನ್ಯ ಸದಸ್ಯರು ಧೈರ್ಯಕೊಟ್ಟರೆ ಕೋರ್ಟಿನಲ್ಲಿ ಯಾವ ರೀತಿ ತೀರ್ಮಾನ ಬರುತ್ತದೋ ಆ ರೀತಿ ಧೈರ್ಯವಾಗಿ ಅದನ್ನು ಇಂಪ್ಲಿಮೆಂಟ್ ಮಾಡುತ್ತೇವೆ.

ಶ್ರೀಮತಿ ಚಂಪಾಬಾಯಿ ಛೋಗಾಳೆ.—ರಾಮದುರ್ಗದ ಈ ಸೊಸೈಟಿಗೆ ಕಾರ್ಯದರ್ಶಿಯವರನ್ನು ನೇಮಕಮಾಡುವುದಕ್ಕೆ ಮತ್ತಾವ ತಾಲ್ಲೂಕಿನಿಂದ ತೆಗೆದುಕೊಳ್ಳುತ್ತೀರಾ ?

(*No answer*)

Sri H. SIDDAVEERAPPA.—On what ground has the Secretary approached the High Court ? What is his contention ?

Sri P. M. NADGOUDA (Minister for Development).—His contention is that the Chief Marketing Officer has no power to fix his salary and it is only the Market Committee that has got powers to fix his pay.

ಶ್ರೀ ಎಂ. ಎನ್. ರಾಮಣ್ಣ.—ಚೀಫ್ ಮಾರ್ಕೆಟಿಂಗ್ ಆಫೀಸರ್ ಅವರು ಕಾರ್ಯದರ್ಶಿಯವರು ಮಾಡಿರುವುದು ಕಾನೂನಿಗೆ ವಿರೋಧವಾದುದು ಎಂಬುದಾಗಿ ವರದಿ ಮಾಡಿದ ಮೇಲೆ ಮತ್ತು ಅವರು ಅಬ್‌ಜಕ್ಷನ್ ಮಾಡಿದಮೇಲೆ ಆ ಸೊಸೈಟಿಯ ಕಮಿಟಿಯವರು ಅದರ ಮೇಲೆ ಕ್ರಮ ತೆಗೆದುಕೊಂಡು ಸರ್ಕಾರಕ್ಕೆ ವರದಿಮಾಡಿಲ್ಲವೇ ?

ಶ್ರೀ ಬಿ. ಎರ್. ಗೌಡ.—ಮಾರ್ಕೆಟ್ ಕಮಿಟಿಯೊಳಗೆ 1-2-65ರವರೆಗೆ ಸ್ವತಂತ್ರಾಧಿಕಾರ ವಿತ್ತು. ಸ್ವತಂತ್ರಾಧಿಕಾರಿಗಳೂ ಇದ್ದರು. 1-2-65 ಆದಮೇಲೆ ಆ ಮಾರ್ಕೆಟ್ ಕಮಿಟಿಯ ಸೆಕ್ರೆಟರಿಯವರ ಪ್ರಶ್ನೆ ಬಂದಿದೆ.

Residential Quarters for Judicial Officers

448. Sri R. G. WALI (Hubli).—

Will the Minister for Law, Labour and Parliamentary Affairs be pleased to state :—

(*a*) whether the Government has taken any action for construction of residential quarters for Judicial Officers both at District headquarters and at other places where Munsiffs Courts exist ;

(*b*) if so, whether any quarters have been provided to the Judicial Officers at Hubli in particular ?

Sri K. PUTTASWAMY (Minister for Law, Labour and Parliamentary Affairs).—

(*a*) Yes.

(*b*) No.

Sri R. G. WALI.—There was a proposal to acquire some of the houses from the Housing Board and provide them to these officers at Hubli. May I know what action has been taken in respect of this matter ?

Sri K. PUTTASWAMY.—That matter is under consideration of the Government.